# ಕರ್ನಾಟಕ ಮೀನುಗಾರಿಕಾಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರಕಾರದಉದ್ಯಮ)
**ಹೊಯ್ಗೆಬಜಾರ್, ಮಂಗಳೂರು-575001.**

E-Mail: kfdcixe@yahoo.com ದೂರವಾಣಿ : (ಕಛೇರಿ) 2421281/2
Website: www.karnatakafisheries.com ಫ್ಯಾಕ್ಸ್(0824) 2424560

ಕ್ರಮಾಂಕ:ಕಮೀಅನಿನಿ/ಆಡಳಿತ/1/2017-18 ದಿನಾಂಕ:10.01.2018

## ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಮೀಸಲಿರಿಸಿದ ಹುದ್ದೆಯ ನೇಮಕಾತಿ

ಭಾರತೀಯ ಸಂವಿಧಾನದಅನುಚ್ಛೇಧ 371(ಜೆ)ಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಕರ್ನಾಟಕ ಸಾರ್ವಜನಿಕಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ತಿದ್ದುಪಡಿಆದೇಶ 2013ರ ಕಂಡಿಕೆ-13(ಐ)ನಂತೆರಾಜ್ಯ ಮಟ್ಟದ ಸಂಸ್ಥೆಯಾದಕರ್ನಾಟಕ ಮೀನುಗಾರಿಕಾಅಭಿವೃದ್ಧಿ ನಿಗಮ ನಿ., ಮಂಗಳೂರು ಇದರಅಧಿಸೂಚನೆಸಂಖ್ಯೆ:ಕಮೀಅನಿನಿ/ಸಿಬ್ಬಂದಿ/ಹೈ.ಕ.ಅಭಿವೃದ್ಧಿ/2013-14ದಿನಾಂಕ:29.04.2015ರನ್ವಯ ಹೈದರಾಬಾದ್-ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವ್ಯಕ್ತಿಗಳಿಗೆ ಲಭ್ಯವಿರುವಈ ಕೆಳಕಂಡ 'ಬಿ' ವೃಂದದ 1 ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲುಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು | ವಿದ್ಯಾರ್ಹತೆ | ಹುದ್ದೆಗಳ ವರ್ಗೀಕರಣ | | ಒಟ್ಟು ಹುದ್ದೆಗಳು | ವೇತನ ಶ್ರೇಣಿ |
|---|---|---|---|---|---|---|
| | | | ಸಾಮಾನ್ಯ/ ಇತರ | ಮಹಿಳೆ | | |
| 1 | ಕಾರ್ಯನಿರ್ವಾಹಕರು | 1. ಅಂಗೀಕೃತ ವಿಶ್ವವಿದ್ಯಾನಿಲಯದಲ್ಲಿ ಮೀನುಗಾರಿಕೆ ವಿಜ್ಞಾನದಲ್ಲಿ ಮಾಸ್ಟರ್ಸ್ ಪದವಿ (ಎಂ.ಎಫ್.ಎಸ್ಸಿ)<br>2. ಮೀನು ಸಂಸ್ಕರಣೆ (Fish Processing)/ ಮಾರ್ಕೆಟಿಂಗ್‌ನಲ್ಲಿ ಕನಿಷ್ಠ 3 ವರ್ಷಗಳ ಅನುಭವ ಹೊಂದಿರಬೇಕು. | 1 | - | 1 | 22800-43200 |
| | ಒಟ್ಟು | | 1 | - | 1 | |

1. **ವಯೋಮಿತಿ:** ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕಡೆಯ ದಿನದಂದುಅಭ್ಯರ್ಥಿಯು ಕೆಳಗೆ ಕಾಣಿಸಿದ ವಯೋಮಿತಿ ಹೊಂದಿರತಕ್ಕದ್ದು.

1. ಸಾಮಾನ್ಯ ವರ್ಗ - ಕನಿಷ್ಠ - 18 ವರ್ಷಗರಿಷ್ಠ - 35 ವರ್ಷ2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ - ಕನಿಷ್ಠ - 18 ವರ್ಷಗರಿಷ್ಠ - 40 ವರ್ಷ

2. **<u>ಅರ್ಜಿ ಶುಲ್ಕ:</u>**

1. ಸಾಮಾನ್ಯ ವರ್ಗ – ರೂ.300/-

2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ – ರೂ.150/-

ಮೇಲೆ ತಿಳಿಸಲಾದ ಮೊತ್ತಕ್ಕೆಕ್ರಾಸ್ ಮಾಡಿದಡಿಮಾಂಡ್‌ಡ್ರಾಫ್ಟನ್ನುManaging Director, Karnataka Fisheries Development Corporation Ltd., Mangalore ಇವರ ಹೆಸರಿನಲ್ಲಿ ಪಡೆದುಅರ್ಜಿಯೊಂದಿಗೆ ಲಗತ್ತಿಸುವುದು.

3. **<u>ಅರ್ಜಿ ನಮೂನೆ:</u>**ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಮಾತ್ರಅರ್ಜಿ ಸಲ್ಲಿಸಬೇಕು. ಅರ್ಜಿಯನ್ನು ನಿಗಮದ ವೆಬ್‌ಸೈಟ್www.kfdcfish.comನಿಂದdownload ಮಾಡಿಕೊಳ್ಳುವುದು. ಇಲ್ಲವೇ ಅರ್ಜಿಗಳನ್ನು ನಿಗಮದಕೇಂದ್ರ ಕಚೇರಿಯಲ್ಲಿಕಚೇರಿಅವಧಿಯಲ್ಲಿರಜಾ ದಿನಗಳನ್ನು ಹೊರತುಪಡಿಸಿ ಪಡೆಯಬಹುದು. ಅರ್ಜಿಯಲ್ಲಿ ವಿಳಾಸದೊಂದಿಗೆ ದೂರವಾಣಿ ಸಂಖ್ಯೆಯನ್ನುಕಡ್ಡಾಯವಾಗಿ ನಮೂದಿಸುವುದು.

4. **<u>ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸುವುದು.</u>**

i) ಅರ್ಜಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಕ್ಕೆ ಸಹಿ ಮಾಡಿ ಲಗತ್ತಿಸಬೇಕು.

ii) ಜನ್ಮ ದಿನಾಂಕ, ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರದ ನಕಲುಗಳನ್ನು ಗಜೆಟೆಡ್ ಅಧಿಕಾರಿಗಳ ದೃಢೀಕರಣದೊಂದಿಗೆ ಲಗತ್ತಿಸುವುದು.

iii) ಅವಶ್ಯಕಅನುಭವ ಪ್ರಮಾಣ ಪತ್ರದದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸುವುದು.

iv)ಹೈದ್ರಾಬಾದ್-ಕರ್ನಾಟಕ ಭಾಗದ ಬಳ್ಳಾರಿ, ಕೊಪ್ಪಳ, ರಾಯಚೂರು, ಕಲಬುರಗಿ, ಯಾದಗಿರಿ ಮತ್ತು ಬೀದರ್ ಜಿಲ್ಲೆಗಳಿಗೆ

ಸಂಬಂಧಿಸಿದಂತೆ ಭಾರತ ಸಂವಿಧಾನದಅನುಚ್ಛೇಧ 371(ಜೆ)ರನ್ವಯ ನೇರ ನೇಮಕಾತಿಗೆ ಆ ಭಾಗದ 6 ಜಿಲ್ಲೆಗಳ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ. ಸದ್ರಿ ಹುದ್ದೆಗೆ ಆ ಭಾಗದ ಅಭ್ಯರ್ಥಿಗಳು ಮಾತ್ರಅರ್ಜಿ ಸಲ್ಲಿಸತಕ್ಕದ್ದು.

v) ಸದ್ರಿ ಮೇಲಿನ ಹುದ್ದೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು

- ಅರ್ಹತಾ ಪ್ರಮಾಣ ಪತ್ರ(ಅನುಚ್ಛೇಧ 371(ಜೆ) ಮೇರೆಗೆ)
- ವಾಸ ಸ್ಥಳ ಪ್ರಮಾಣ ಪತ್ರ
- ವ್ಯಾಸಂಗಪ್ರಮಾಣ ಪತ್ರ.
- ವಿವಾಹ ಪ್ರಮಾಣ ಪತ್ರ
- ಸ್ವಗ್ರಾಮ (ಅಥವಾ ಸ್ಥಳ) ಪ್ರಮಾಣ ಪತ್ರಅಥವಾ
- ವಾರಸ ಪ್ರಮಾಣ ಪತ್ರಅಥವಾ
- ಈ ಮೇಲಿನ ಪ್ರಮಾಣ ಪತ್ರಗಳ ಒಂದುಅಥವಾ ಹೆಚ್ಚಿನ ಸಂಯೋಜನೆ.

ಮೇಲಿನ ಪ್ರಮಾಣ ಪತ್ರಗಳ ಯಥಾ ಪ್ರತಿಗಳನ್ನು ಸಕ್ಷಮ ಅಧಿಕಾರಿಗಳ ದೃಢೀಕರಣದೊಂದಿಗೆಅರ್ಜಿಯೊಂದಿಗೆ ಲಗ್ತೀಕರಿಸುವುದು.

vi) ಅಭ್ಯರ್ಥಿಯು ಈಗಾಗಲೇ ಯಾವುದಾದರೂ ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಲ್ಲಿ

ಕಾರ್ಯನಿರ್ವಹಿಸುತ್ತಿದ್ದರೆಅಂತಹ

ಸಂಸ್ಥೆಯ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಬೇಕು.

vii) ಗುಣ ನಡತೆಯ ಬಗ್ಗೆ ಶಿಕ್ಷಣ ಸಂಸ್ಥೆ ಮುಖ್ಯಸ್ಥರಿಂದ ಹಾಗೂ ಇತರೆಇಬ್ಬರುಗಜೆಟೆಡ್ ಅಧಿಕಾರಿಗಳಿಂದ ಪ್ರಮಾಣಪತ್ರ

ಪಡೆದು ಲಗತ್ತಿಸಬೇಕು.

viii) ಲಕೋಟೆಯ ಮೇಲೆ ಅರ್ಜಿ ಸಲ್ಲಿಸಿರುವ ಹುದ್ದೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸಬೇಕು.

ix) ಭರ್ತಿ ಮಾಡಿದ ನಿಗದಿತ ನಮೂನೆಯಅರ್ಜಿ ಫಾರಂಅನ್ನು ಮೇಲೆ ತಿಳಿಸಿರುವ ದಾಖಲೆಗಳೊಂದಿಗೆ Managing

Director, Karnataka Fisheries Development Corporation Ltd., Hoige Bazar, Mangalore-575001

ಇವರಿಗೆ ದಿನಾಂಕ:09.02.2018 ರ ಸಂಜೆ 5.30ರೊಳಗಾಗಿಅಂಚೆ ಮೂಲಕ, ಕೊರಿಯರ್ ಮೂಲಕ ಇಲ್ಲವೇ ಮುದ್ದಾಂ

ಆಗಿ ತಲುಪಿಸಬೇಕು. ವಿಳಂಬವಾಗಿ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

**5. ನೇಮಕಾತಿ ವಿಧಾನ:** ಆಯ್ಕೆಯನ್ನುಅರ್ಹತೆ (Merit) ಮತ್ತು ಸಂದರ್ಶನದಆಧಾರದ ಮೇಲೆ ಆಯ್ಕೆ ಮಾಡಲಾಗುವುದು.

6. ಅಭ್ಯರ್ಥಿಗಳಿಗೆ ಸೂಚನೆ ಮತ್ತು ಷರತ್ತುಗಳನ್ನು ನಿಗಮದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

**ವ್ಯವಸ್ಥಾಪಕ ನಿರ್ದೇಶಕರು,**

**ಕರ್ನಾಟಕ ಮೀನುಗಾರಿಕಾಅಭಿವೃದ್ಧಿ ನಿಗಮ ನಿ.,ಮಂಗಳೂರು**